ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 23-01-2018

ಪ್ರಕಟಣೆಯ ಕೃಪೆಗಾಗಿ

**ರಾಜಕೀಯಕ್ಕೆ ಅರ್ಹ ವ್ಯಕ್ತಿಗಳಿಗೆ ಪ್ರವೇಶ ಸಿಗುವಂತಾಗಬೇಕು – ಪ್ರೊ. ಉಮೇಶ**

**ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಅಂತರ ಕಾಲೇಜು ಸ್ಪರ್ಧೆ**

ಕೊಳ್ಳೇಗಾಲ 23-01-2018 : ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರಾಜಕೀಯ ಅರ್ಹ ವ್ಯಕ್ತಿಗಳಿಗೆ ಪ್ರವೇಶ ನೀಡಬೇಕಾದರೆ ಕೆಲವು ನಿರ್ಧಿಷ್ಠ ಮಾನದಂಡಗಳನ್ನು ನಿರ್ಧರಿಸಿರುತ್ತಾರೆ. ಇದು ಎಲ್ಲ ದೇಶಗಳಿಗೂ ಅನ್ವಯವಾಗಬೇಕು. ಅರ್ಹ ಅಭ್ಯರ್ಥಿಗಳು ಮಾತ್ರ ರಾಜಕೀಯ ಪ್ರವೇಶ ಮಾಡುವಂತಾಗಿರಬೇಕು ಎಂದು ಇತಿಹಾಸ ವಿಭಾಗದ ಮುಖ್ಯಸ್ಥ ಶ್ರೀ ಹೆಚ್.ಜಿ. ನಟರಾಜನ್ ಅಭಿಪ್ರಾಯಿಸಿದರು.

ಪಟ್ಟಣದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗದಿಂದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ಅಂತರ ಕಾಲೇಜು ಪ್ರಬಂಧ ಹಾಗೂ ಭಾಷಣ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಬ್ರಿಟನ್‌ನ ಲೇಬರ್ ಪಾರ್ಟಿಯಲ್ಲಿ ಅಭ್ಯರ್ಥಿ ಆಯ್ಕೆಗೆ ನಿರ್ಧಿಷ್ಠ ಪ್ರಕ್ರಿಯೆ ಅನುಸರಿಸಲಾಗುತ್ತದೆ. ಒಂದು ರಾಷ್ಟ್ರದ ಅಭಿವೃದ್ಧಿಯು ಅಲ್ಲಿನ ರಾಜಕಾರಣಿಗಳ ದಕ್ಷತೆಯನ್ನು ಅವಲಂಭಿಸಿರುತ್ತದೆ. ಬಲಿಷ್ಠ ಭಾರತ ನಿರ್ಮಾಣದಲ್ಲಿ ಮತದಾರರ ಪಾತ್ರ ಬಲು ಮುಖ್ಯ ಅದರಲ್ಲಿಯೂ ಯುವ ಮತದಾರರ ಪಾತ್ರ ಮಹತ್ವದ್ದಾಗಿದೆ. ಯುವ ಮತದಾರರ ಸಂಖ್ಯೆ ನಮ್ಮ ದೇಶದ ಜನಸಂಖ್ಯೆಯ ಹೆಚ್ಚು ಕಡಿಮೆ ಅರ್ಧದಷ್ಟಿರುವುದರಿಂದ ಯುವ ಮತದಾರರಿಂದ ಸಧೃಡ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ತಿಳಿಸಿದರು.

ಪ್ರಾಚಾರ್ಯ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಮತದಾನ ಪ್ರತಿಯೊಬ್ಬ ಮತದಾರನ ಪವಿತ್ರ ಹಕ್ಕು. ಸುಭದ್ರ ರಾಷ್ಟ್ರ ನಿಮಾಣದಲ್ಲಿ ಪ್ರತಿಯೊಬ್ಬ ಮತದಾರ ಚಲಾಯಿಸುವ ಮತದಾನ ಮಹತ್ತರ ಪಾತ್ರ ವಹಿಸುತ್ತದೆ, ತಾವೆಲ್ಲರೂ ಯುವ ಮತದಾರರಾಗಿದ್ದೀರಿ. ಮತದಾನದ ಹಕ್ಕನ್ನು ಚಲಾಯಿಸುವುದಲ್ಲದೆ ಇತರರಲ್ಲಿಯೂ ಅರಿವು ಮೂಡಿಸುವಂತೆ ಕರೆ ನೀಡಿದರು.

ಶ್ರೀ ಕೆ ಎಸ್ ಗುರುಪ್ರಸಾದ್, ಶ್ರೀಮತಿ ಎಸ್ ಮಮತ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ಅಂಜನ ಸ್ವಾಗತಿಸಿದರು, ಕು. ಶಶಿಕಲಾ ವಂದಿಸಿದರು. ಜಿಲ್ಲೆಯ ವಿವಿಧ ಕಾಲೇಜುಗಳಿಂದ ಸುಮಾರು 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯಶಾಸ್ತ್ರ ವಿಭಾಗದಿಂದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ಅಂತರ ಕಾಲೇಜು ಪ್ರಬಂಧ ಹಾಗೂ ಭಾಷಣ ಸ್ಪರ್ಧೆ.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಜಿ. ನಟರಾಜನ್ ರವರಿಂದ ಉದ್ಘಾಟನೆ. ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಪ್ರಾಚಾರ್ಯ ಪ್ರೊ. ಉಮೇಶ ಹಾಗೂ ಶ್ರೀ ಕೆ ಎಸ್ ಗುರುಪ್ರಸಾದ್ ರವರನ್ನು ಕಾಣಬಹುದು.



ರಾಜ್ಯಶಾಸ್ತ್ರ ವಿಭಾಗದಿಂದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ಅಂತರ ಕಾಲೇಜು ಪ್ರಬಂಧ ಹಾಗೂ ಭಾಷಣ ಸ್ಪರ್ಧೆ.

ಶ್ರೀ ಹೆಚ್ ಜಿ ನಟರಾಜನ್‌ರವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡುತ್ತಿರುವುದು.

ಚಿತ್ರದಲ್ಲಿ ಶ್ರೀಮತಿ ಎಸ್ ಮಮತ, ಪ್ರಾಚಾರ್ಯ ಪ್ರೊ. ಉಮೇಶ, ಶ್ರೀ ಕೆ ಎಸ್ ಗುರುಪ್ರಸಾದ್ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಧ್ಯಾಪಕರು ಹಾಗೂ ವಿದ್ಯಾರ್ಥಿನಿಯರು.

